# ಹಟ್ಟಿಗೆ ಹೊ ರಟ್ಟೆಗೆ ಶಕ್ತಿ



ಕಮ್ಮಾರಿಕೆಯಲ್ಲಿ ತೊಡಗಿರುವ ದೇವರಾಜ್

## ಬಸವಳಿದ ಬದುಕುಗಳಿಗೆ ಸೌರ ಬೆಳದಿಂಗಳು

**ಸೌರಶಕ್ತಿಯ ಮೂಲಕ ಅಭಿವೃದ್ಧಿಯ ಹೊಸ ಶಕೆಯನ್ನು ರೂಪಿಸುವ ಪ್ರಯತ್ನಗಳು ವಿರಳವಾಗಿಯಾದರೂ ನಡೆಯುತ್ತಿವೆ. ಸರಳ ಬದುಕಿಗೆ ಸೌರಶಕ್ತಿ ಪೂರಕ. ಸೌರಶಕ್ತಿಯ ಮೂಲಕ ಬದುಕು ಬದಲಿಸಿಕೊಂಡ ಕೆಲವರ ಕಥನಗಳು ಇಲ್ಲಿವೆ.**

■ **ಉಮಾ ಅನಂತ್**

ಮೈಸೂರು ಜಿಲ್ಲೆ ಹೆಚ್‌ಡಿಕೋಟೆಯಿಂದ ಎಂಟು ಕಿ.ಮೀ. ದೂರವಿರುವ ಸೊಳ್ಳೆಪುರ ಹಾಡಿ ಗಿರಿಜನರೇ ವಾಸವಿರುವ ಕುಗ್ರಾಮ. ಮೂಲಭೂತ ಸೌಲಭ್ಯಗಳಿಂದ ವಂಚಿತವಾದ ಈ ಹಾಡಿ, 'ಸೆಲ್ಕೋ' ನೆರವಿನಿಂದೀಗ ಬೆಳಕು ಕಂಡಿದೆ. ಮನೆ ಮನೆಗಳಲ್ಲಿ ಸೋಲಾರ್ ದೀಪ!

***

ಚನ್ನಪಟ್ಟಣ ತಾಲ್ಲೂಕಿನ ಬೇವೂರು ಗ್ರಾಮದಲ್ಲಿ ಗುಡಿಕೈಗಾರಿಕೆಗೆ ಸೋಲಾರ್ ಹೊಸ ಸ್ವರೂಪ ನೀಡಿದೆ. ಇಲ್ಲಿನ ಕುಂಬಾರಿಕೆ ಕಲೆ ಈಗ ಆಧುನಿಕ ಸ್ಪರ್ಶ ಪಡೆದಿದೆ. ಮಡಿಕೆ–ಕುಡಿಕೆ ತಯಾರಾಗುವ ತಿರುಗು ಮಣೆಗೆ ಸೌರ ವಿದ್ಯುತ್ ಸಂಪರ್ಕ ದೊರೆತಿದ್ದು, ಉತ್ಪಾದನೆ ದುಪ್ಪಟ್ಟಾಗಿದೆ.

***

ಕರೆಂಟ್ ಇಲ್ಲದಿದ್ದರೆ ಕೆಲಸವೇ ಬಂದ್; ಉದರ ನಿರ್ವಹಣೆ ಹೇಗೆ ಮಾಡುವುದು ಎಂದು ಕೊರಗುತ್ತಿದ್ದ ಚನ್ನಪಟ್ಟಣ ಸಮೀಪದ ಅಬ್ಬೂರು ಗ್ರಾಮದ ರೇಣುಕಮ್ಮ ಅವರು ಸೌರಶಕ್ತಿ ಚಾಲಿತ ಜೆರಾಕ್ಸ್ ಯಂತ್ರ ಬಳಸುತ್ತಿದ್ದಾರೆ. ಇದೀಗ ಸೋಲಾರ್ ಶಕ್ತಿಯಿಂದ ಜೆರಾಕ್ಸ್ ಯಂತ್ರ ಪಕಪಕನೆ ದಾಖಲೆಗಳ ಹಾಳೆಗಳನ್ನು ನಕಲು ಮಾಡುತ್ತದೆ. ರೇಣುಕಮ್ಮನಿಗೆ ಕೈತುಂಬ ಕೆಲಸ, ಉತ್ತಮ ಗಳಿಕೆ.

***

ಇವೆಲ್ಲ ಸೋಲಾರ್‌ನಿಂದ ಬದುಕು ಕಟ್ಟಿಕೊಂಡ ಹಳ್ಳಿಗಳ ಕೆಲವು ಉದಾಹರಣೆಗಳಷ್ಟೆ. ದೀಪ, ಕುಡಿಯುವ ನೀರಿನ ಘಟಕ ಮಾತ್ರವಲ್ಲದೆ ನಶಿಸಿಹೋಗುತ್ತಿರುವ ಕುಂಬಾರಿಕೆ, ಕಮ್ಮಾರಿಕೆಗಳಂತಹ ಗುಡಿ ಕೈಗಾರಿಕೆ, ಸ್ಮಾರ್ಟ್ ಕ್ಲಾಸ್, ಜೆರಾಕ್ಸ್ ಮೆಷಿನ್, ಹಾಲು ಕರೆಯುವ ಯಂತ್ರ, ಹೊಲಿಗೆ ಮೆಷಿನ್... ಮುಂತಾದವುಗಳಿಗೆ ಸೋಲಾರ್ ಶಕ್ತಿ ಹೊಸ ಚೈತನ್ಯ ನೀಡಿದೆ. ಈ ಚೈತನ್ಯದ ಹಿಂದಿನ ಪ್ರೇರಣೆ 'ಸೆಲ್ಕೋ'. ಇಸ್ತ್ರಿ ಅಂಗಡಿ, ಹಿಟ್ಟಿನ ಗಿರಣಿ, ರೊಟ್ಟಿ ಮೇಕರ್ ಸೇರಿದಂತೆ ಜೀವನ ನಿರ್ವಹಣೆಗೆ ಪೂರಕವಾದ ಸುಮಾರು 90 ಯೋಜನೆಗಳನ್ನು ಸೆಲ್ಕೋ ಪರಿಚಯಿಸಿದೆ. ರಾಜ್ಯದಾದ್ಯಂತ ಸೆಲ್ಕೋ 3,50,000 ಕುಟುಂಬಗಳಿಗೆ ಸೋಲಾರ್ ದೀಪ ಒದಗಿಸಿದೆ.

ವಿದ್ಯುತ್, ಕಲ್ಲಿದ್ದಲು, ಪೆಟ್ರೋಲ್, ಡೀಸೆಲ್ ಎಲ್ಲವೂ 'ಮುಗಿದು ಹೋಗುವಂಥ ಇಂಧನ'. ಇಂಥ ಸಮಯದಲ್ಲಿ ನಾವು ಮೊರೆ ಹೋಗಬೇಕಾದದ್ದು ತಲೆಯ ಮೇಲಿರುವ 'ಸೂರ್ಯ'ನನ್ನು ಮಾತ್ರ ಎಂಬುದು ಸೆಲ್ಕೋ ನಂಬಿಕೆ. ಮಹಿಳಾ ಸಬಲೀಕರಣಕ್ಕೂ ಸೆಲ್ಕೋ ಒತ್ತು ನೀಡಿದೆ.

'ನಾವು ರಾಜ್ಯದಾದ್ಯಂತ 3000ಕ್ಕೂ ಹೆಚ್ಚು ಮಂದಿಗೆ ಜೀವನೋಪಾಯಕ್ಕೆ ಬೇಕಾದ ಸೌರಉತ್ಪನ್ನಗಳನ್ನು ಪೂರೈಸಿದ್ದೇವೆ. ಇದರಲ್ಲಿ 1,250 ಮಂದಿ ಸೌರಶಕ್ತಿ ಚಾಲಿತ ಹೊಲಿಗೆ ಯಂತ್ರವನ್ನು ಹೊಂದಿದ್ದಾರೆ. ಕಮ್ಮಾರಿಕೆಯಲ್ಲಿ ಬಳಸುವ ಗಾಳಿ ಊದು ಯಂತ್ರವನ್ನು 600ಕ್ಕೂ ಹೆಚ್ಚು ಜನರಿಗೆ ನೀಡಿದ್ದೇವೆ. ಕುಗ್ರಾಮದ ಬಡವರಿಗೆ, ಹಾಡಿಯ ಆದಿವಾಸಿ ಜನರಿಗೆ ಜೀವನೋಪಾಯಕ್ಕೆ ನೆರವಾಗುತ್ತಿದ್ದೇವೆ' ಎಂದು ಹೇಳುತ್ತಾರೆ ಸೆಲ್ಕೋ ಸಂಸ್ಥೆಯ ಪ್ರಾದೇಶಿಕ ವ್ಯವಸ್ಥಾಪಕ ಬಿ. ಪ್ರಸಾದ್.

### ಸೊಳ್ಳೆಪುರ ಸಂಪೂರ್ಣ ಸೋಲಾರ್

ಮೈಸೂರು ಜಿಲ್ಲೆ ಹೆಚ್‌ಡಿಕೋಟೆಯಿಂದ ಎಂಟು ಕಿ.ಮೀ. ದೂರವಿರುವ ಸೊಳ್ಳೆಪುರ ಹಾಡಿಯಲ್ಲಿ ಜೇನು ಕುರುಬ, ಕಾಡು ಕುರುಬ, ಯೆರೆವಾ ಜನಾಂಗದ ಆದಿವಾಸಿ ಕುಟುಂಬಗಳು ವಾಸಿಸುತ್ತಿವೆ. ಈ ಹಾಡಿ ಈಗ ಸುಸಜ್ಜಿತ ನಾಗರಿಕ ಸೌಲಭ್ಯವನ್ನು ಪಡೆದಿದೆ.

'ಆದಿವಾಸಿ ಮಹಿಳೆಯರಿಗಾಗಿ ಸೋಲಾರ್ ಹೊಲಿಗೆ ಯಂತ್ರಗಳನ್ನು ಒದಗಿಸಲಾಗಿದೆ. ದಿನಕ್ಕೆ 200ರಿಂದ 300 ರೂಪಾಯಿಗಳಷ್ಟು ದುಡಿಮೆ ಸಾಧ್ಯವಾಗಲಿದೆ. ಸುಮಾರು 75 ಕುಟುಂಬ ವಾಸಿಸುತ್ತಿರುವ ಈ ಹಾಡಿ ಇದೀಗ ಸಂಪೂರ್ಣ ಸೋಲಾರ್ ಗ್ರಾಮ' ಎಂದು ಮಾಹಿತಿ ನೀಡುತ್ತಾರೆ ಸೆಲ್ಕೋ ಮೈಸೂರು ವಿಭಾಗದ ಪ್ರಾದೇಶಿಕ ವ್ಯವಸ್ಥಾಪಕ ಸುಕುಮಾರ್ ಕೆ.

